## ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

### ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ –30.08.2023

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | – | ಪವಿತ್ರ ಪಿ | ಫ್ರಾ.ಸಾ. | – | 08 |
| ಗಂಡನ ಹೆಸರು | – | ನಾಗರಾಜ್ | ಚಾ.ಸಾ. | – | 08 |
| ವಯಸ್ಸು | – | 28 ವರ್ಷ | | | |
| ಉದ್ಯೋಗ | – | ಕೂಲಿ ಕೆಲಸ | | | |
| ವಾಸ ಸ್ಥಳ | – | ಮಾರುತಿಹಳ್ಳಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ವಿಶೇಷ ಸರ್ಕಾರಿ ಅಭಿಯೋಜಕರಿಂದ –**

1. ಚಾಸಾ 1 , 7 ಗೊತ್ತು . ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತು .

2. 3 ವರ್ಷದ ಹಿಂದೆ ಮಧ್ಯಾಹ್ನ 3 ಗಂಟೆಯಲ್ಲಿ ನಾನು ನಮ್ಮ ಮನೆಯ ಬಳಿ ಇದ್ದಾಗ 10 ಮತ್ತು 11 ನೇ ಆರೋಪಿಗಳು ತನ್ನ ಮಾವ ಚಿತ್ತಪ್ಪನಿಗೆ ಹೊಡೆದಿದ್ದಾರೆ ಎಂದು ಚಾಸಾ 7 ರವರ ಮನೆಗೆ ಕಲ್ಲು ಹೊಡೆಯುತ್ತಿದ್ದರು . ನಾವು ದೂರ ನಿಂತಿದ್ದೇವು ನಂತರ ಅವರು ಹೋರಟು ಹೋದರು . ಚಾಸಾ 01 ರವರ ಹೊಲದಲ್ಲಿ ಚಾಸಾ 01 ರವರ ಮೇಲೆ ಗಲಾಟೆ ಮಾಡಿಕೊಂಡು ಬಂದಿದ್ದರು . ಈ ಎಲ್ಲಾ ವಿಚಾರವನ್ನು ಪೋಲೀಸರಿಗೆ ಹೇಳಿದ್ದೇನೆ , ಸಾಕ್ಷಿಗೆ ನಿಪಿ –12 ನ್ನು ತೋರಿಸಿದ್ದು ಗುರುತಿಸಿದ್ದರಿಂದ ನಿಪಿ –12(ಬಿ)ಎಂದು ಗುರುತಿಸಲಾಗಿದೆ. ಚಾಸಾ 7 ರವರ ಮನೆಯ ಹತ್ತಿರ ಪೋಲೀಸರು ಬಂದು ಮಹಜರ್ ಮಾಡಿದ್ದುನಾನು ಸಹಿ ಮಾಡಿರುತ್ತೇನೆ . ಸಾಕ್ಷಿ 2 ಪೋಟೋಗಳನ್ನು ನೋಡಿ ಆ ಸಂದರ್ಭದಲ್ಲಿ ತೆಗೆದ ಫೋಟೋಗಳು ಎಂದು ಗುರುತಿಸಿದ್ದರಿಂದ ನಿಪಿ – 13, 14 ಎಂದು ಗುರುತಿಸಲಾಗಿದೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 10 ಮತ್ತು 11 ನೇ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ .

**– ಪಾಟೀ ಸವಾಲು – ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –**

3 . ಚಾಸಾ 1, 7 ನನ್ನ ಮಾವ ಮತ್ತು ಅತ್ತೆ . 10 , 11 ನೇ ಆರೋಪಿಗಳು ಕಲ್ಲು ಬೀಸಿದರು . ಆಗ ನಾನು 2 ಮನೆ ದೂರ ಇದ್ದೆ . ಗಲಾಟೆಯಾದ 1–2 ದಿನಕ್ಕೆ ಪೋಲೀಸರು ಅಲ್ಲಿಗೆ ಬಂದಿದ್ದರು . ಪೋಲೀಸರು ಬಂದರು ಎಂದು ನಾನು ಮಹಜರ್ ಮಾಡಿದ ಸ್ಥಳಕ್ಕೆ ಹೋದೆ . ಏನು ಚಕ್ಕುಬಂದಿ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ . ನಿಪಿ –12 ರಲ್ಲಿ ಏನು ಬರೆದಿದೆ ಎಂದು ನನಗೆ ಹೇಳಲು ಅಗುವುದಿಲ್ಲ ಎಂದರೆ ಸರಿ . 10 ಮತ್ತು 11 ನೇ ಆರೋಪಿಗಳು ಕಲ್ಲು ಹೊಡೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪು ಮಾಡದೇ ಇದ್ದರು ಚಾಸಾ –1 ನನ್ನ ಸಂಬಂಧಿಕರಾದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.

# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಸ್ಪೆಷಲ್ ಕೇಸ್ (ಎಸ್.ಸಿ./ಎಸ್.ಟಿ.) ನಂ. 08/2021

ಪ್ರ.ವ.ಬೋ. ದಿನಾಂಕ -30.08.2023

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ಪಾರ್ವತಮ್ಮ | ಫ್ರಾ.ಸಾ. | - | 09 |
| ಗಂಡನ ಹೆಸರು | - | ಮೂಡಲಗಿರಿಯಪ್ಪ | ಚಾ.ಸಾ. | - | 09 |
| ವಯಸ್ಸು | - | 35 ವರ್ಷ | | | |
| ಉದ್ಯೋಗ | - | ಕೂಲಿ ಕೆಲಸ | | | |
| ವಾಸ ಸ್ಥಳ | - | ಮಾರುತಿಹಳ್ಳಿ | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ವಿಶೇಷ ಸರ್ಕಾರಿ ಅಭಿಯೋಜಕರಿಂದ -**

1. ಚಾಸಾ- 1 , 7 ಗೊತ್ತು . ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತು .

2. 01.08.2020 ರಂದು ಮಧ್ಯಾಹ್ನ 3 ಗಂಟೆಯಲ್ಲಿ ನಾನು ನಮ್ಮ ಮನೆಯ ಬಳಿ ಇದ್ದಾಗ 10 ಮತ್ತು 11 ನೇ ಆರೋಪಿಗಳು ಚಾಸಾ 07 ರವರ ಮನೆಯ ಬಾಗಿಲು ಬಡಿದು ಗಲಾಟೆ ಮಾಡಿದರು . ನಾನು ಗಲಾಟೆ ಮಾಡಬೇಡಿ ಎಂದು ಹೇಳಿ ಕಳುಹಿಸಿದೆ . ಅವರ ಮಾವ ಚಿತ್ತಪ್ಪನನ್ನು ಹೊಲದ ಹತ್ತಿರ ಹೊಡೆದಿದ್ದಾರೆ ಎಂದು ಗಲಾಟೆ ಮಾಡಿದರು . ಈ ವಿಚಾರವನ್ನು ಪೋಲೀಸರಿಗೆ ಹೇಳಿದ್ದೇನೆ . ಸದರಿ ಅಶೋಕ ಮತ್ತು ಮಹಂತೇಶನನ್ನು ನಾನು ನೋಡಿಲ್ಲ . ಅವರನ್ನು ಈ ದಿನ ನ್ಯಾಯಾಲಯದಲ್ಲಿ ಗುರುತಿಸಲು ಅಗುವುದಿಲ್ಲ .

3. ಸಾಕ್ಷಿಗೆ ನಿಪಿ-12 ತೋರಿಸಿದ್ದು ಅವರು ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿರುವುದರಿಂದ ಅದನ್ನು ನಿಪಿ-12( ಸಿ ) ಎಂದು ಗುರುತಿಸಲಾಗಿದೆ. ಚಾಸಾ 7 ರವರ ಮನೆಯ ಹತ್ತಿರ ಪೋಲೀಸರು ಬಂದು ಒಂದು ಫೋಟೋ

ತೆಗೆದು ನನ್ನ ಸಹಿ ಪಡೆದುಕೊಂಡರು . ಆಗ ನಾನು, ಚಾಸಾ 7, 8 ಇದ್ದೇವು . ಸಾಕ್ಷಿ ನಿಪಿ –13, 14 ನ್ನು ಆ ಸಂದರ್ಭದಲ್ಲಿ ತೆಗೆದ ಫೋಟೋ ಎಂದು ಗುರುತಿಸಿರುತ್ತಾರೆ .

**– ಪಾಟೀ ಸವಾಲು – ಆರೋಪಿಗಳ ಪರವಾಗಿ – ಶ್ರೀ ಬಿ.ಎ.ಕೆ ವಕೀಲರಿಂದ –**

4 . ಚಾಸಾ 1 ನನ್ನ ಚಿಕ್ಕಮ್ಮ . ನಾನು 10 ವರ್ಷದಿಂದ ಮಾರುತಿಹಳ್ಳಿಯಲ್ಲಿ ಇದ್ದೇನೆ . ಸ್ಥಳಕ್ಕೆ ಬರುವಂತೆ ನನಗೆ ನೋಟೀಸ್ ನೀಡಿರಲಿಲ್ಲ . ನಿಪಿ –12 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ . ಪೋಲೀಸರು ಸಹಿ ಮಾಡುವಂತೆ ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದರೆ ಸರಿ . ಚಾಸಾ1, 7 ನನಗೆಸಹಿ ಮಾಡುವಂತೆ ಹೇಳಿದರು ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಎಂದೂ ಠಾಣೆಗೆ ಹೋಗಿಲ್ಲ ಎಂದರೆ ಸರಿ . ಪೋಲೀಸರಿಗೆ ನಾನು ಘಟನೆ ಬಗ್ಗೆ ಚಾಸಾ 7 ರವರ ಮನೆ ಹತ್ತಿರ ಹೇಳಿದ್ದೇನೆ . ಪೋಲೀಸರು ಅದನ್ನು ಬರವಣಿಗೆ ಮಾಡಿಕೊಳ್ಳಲಿಲ್ಲ . ಮಾರುತಿ ಹಳ್ಳಿಯ ಎಲ್ಲಾ ಜನರನ್ನು ನಾನು ನೋಡಿದ್ದೇನೆ . ಅಶೋಕ ಮತ್ತು ಮಹಂತೇಶ ಕಲ್ಲುಹೊಡೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿಕೆ ನೀಡಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕೇಸಿನ ಬಗ್ಗೆ ನನಗೆ ಏನು ತಿಳಿಯದೇ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.